

ಯೂರೋಪಿನ ಎಂಟನೇ ದೊಡ್ಡ ರಾಷ್ಟ್ರವಾದ ಇದರ ಜನಸಂಖ್ಯೆ ಸುಮಾರು 55 ಲಕ್ಷ. (ಕರ್ನಾಟಕದ ಜನಸಂಖ್ಯೆ 2014ರ ವೇಳೆಗೆ 6.4 ಕೋಟಿ!) ಅದರ ವಿದ್ಯಾಭ್ಯಾಸದ ಮೂಲ ಧ್ಯೇಯ 'ಎಲ್ಲ ನಾಗರಿಕರಿಗೂ ಸಮಾನ ಅವಕಾಶಗಳನ್ನು ನೀಡುವಂಥದ್ದು'. ಇದರೊಂದಿಗೆ ಕಲಿಯುವುದನ್ನು ಕೆಲಸ ಮಾಡುವಾಗ, ಜೀವನಪೂರ್ತಿ ಮತ್ತು ಅದಕ್ಕಾಗಿ ಒಂದು ಸುವ್ಯವಸ್ಥಿತ ವ್ಯವಸ್ಥೆಯನ್ನು ಇಲ್ಲಿನ ಶಿಕ್ಷಣ ವ್ಯವಸ್ಥೆ ಬೆಂಬಲಿಸುತ್ತದೆ. ಅವರ ಮತ್ತೊಂದು ಮುಖ್ಯ ಗುರಿ ಬಹುಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು.

ಹಾಗಾಗಿ ಫಿನ್ಲೆಂಡ್‌ನಲ್ಲಿ ಇಂಗ್ಲಿಷ್ ಶಾಲೆಗಳಂತೆಯೇ, ಫಿನ್ನಿಷ್ ಮತ್ತು ಸ್ವೀಡಿಷ್ ಶಾಲೆಗಳೂ ಬಹುಸಂಖ್ಯೆಯಲ್ಲಿವೆ. ಅಲ್ಲಿನ ಶಿಕ್ಷಕರ ಪ್ರಕಾರ "ಅವರು ಮಕ್ಕಳನ್ನು ಪ್ರತಿವರ್ಷ 'ಜೀವನ' ಕ್ಕಾಗಿ ತಯಾರು ಮಾಡುತ್ತಾರೆ". ಫಿನ್‌ಲ್ಯಾಂಡ್‌ನ 3,500 ಶಾಲೆಗಳ ಒಟ್ಟು 62,000 ಶಿಕ್ಷಕರು, ಅವರೇ ಕರೆಯುವಂತೆ 'educators' ಹೇಗೆ ಆರಿಸಲ್ಪಡುತ್ತಾರೆ ಗೊತ್ತೆ? ದೇಶದ 'ಕ್ರೀಮ್ ಲೇಯರ್' ನಿಂದ, ಕೆನೆಪದರದಿಂದ. ಅಂದರೆ ಪ್ರತಿ ವರ್ಷದ ಪದವೀಧರರಲ್ಲಿ ಮೊದಲಿಗರಾಗಿರುವವರಲ್ಲಿ ಶೇಕಡಾ 10ರಷ್ಟು 'ಬುದ್ಧಿವಂತ'ರು ಮಾತ್ರ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಲು ಅರ್ಹರು.

ಫಿನ್ಲೆಂಡ್‌ನಲ್ಲಿ ಪ್ರಾಥಮಿಕ ತರಗತಿಗಳಿಗೆ ಶಿಕ್ಷಕನಾಗಲು ನೀವು ಶಿಕ್ಷಣದಲ್ಲಿ ಮಾಸ್ಟರ್ ಡಿಗ್ರಿ ಪಡೆದಿರುವುದಷ್ಟೇ ಅಲ್ಲ, ಸಂಶೋಧನೆ ಮತ್ತು ತರಗತಿಯ ಪ್ರಯೋಗಗಳಲ್ಲಿ ಈ ಚಿಕ್ಕ ರಾಷ್ಟ್ರದ 11 ಪ್ರತಿಷ್ಠಿತ ವಿದ್ಯಾಭ್ಯಾಸದ ಸ್ಕೂಲುಗಳಿಂದ ವಿಶೇಷ ಪರಿಣತಿ ಪಡೆದಿರಬೇಕು! ಅವರಿಗೆ ಕೊಡುವ ಸಂಬಳ ಹೆಚ್ಚು ಎನ್ನುವುದಕ್ಕಿಂತ ಶಿಕ್ಷಕರಾಗಲು ಇಲ್ಲಿಯ ಜನ ಹಾತೊರೆಯುವುದು ಆ ವೃತ್ತಿಗೆ ಇತರ ವೃತ್ತಿಗಳಲ್ಲಿರುವವರಿಗಿಂತ (ವೈದ್ಯಕೀಯ ಮತ್ತು ಲಾಯರ್‌ಗಳಿಗಿಂತ) ಸ್ವಾತಂತ್ರ್ಯ ಮತ್ತು ಗೌರವ ಹೆಚ್ಚು ಎನ್ನುವುದಕ್ಕಾಗಿ! ಮೇಲಧಿಕಾರಿಗಳ 'ಇನ್‌ಸ್ಪೆಕ್ಷನ್' ಅವರಿಗಿಲ್ಲ! ಅವರ ಮತ್ತೊಂದು ಪ್ರಮುಖ ಅರ್ಹತೆ 'ಏನಾದರೂ ಆಗಲಿ, ನಾವೆಷ್ಟೇ ಕಷ್ಟ ಪಡಬೇಕಾಗಲಿ ಕಲಿಸಿಯೇ ತೀರುತ್ತೇವೆ' ಎಂಬ ಭಾವನೆ.

6ನೇ ವರ್ಷಕ್ಕೆ ಆರಂಭವಾಗುವ ಶಾಲಾ ಶಿಕ್ಷಣ ಅವರವರ ಆಯ್ಕೆಯ ಭಾಷೆಯಲ್ಲಿ ಮುಂದುವರೆಯುತ್ತದೆ. ತಮ್ಮನ್ನು ತಾವು ಪರೀಕ್ಷಿಸಿಕೊಳ್ಳುವ **self evaluation** ವಿಧಾನ ಇಲ್ಲಿ ಕಲಿಕೆಯ ಒಂದು ಭಾಗ. ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಕಲಿಸುವ ವಿಧಾನ ಸರಿಹೊಂದಲಿಲ್ಲ ಎಂದಾದರೆ, ಬೇರೆ ಬೇರೆ ತಂತ್ರಗಳನ್ನು ಶಿಕ್ಷಕ ಪ್ರಯೋಗಿಸಲು ಉತ್ಸುಕನಾಗಿರುತ್ತಾನೆ. ಅಲ್ಲಿನ ಒಬ್ಬ ಶಿಕ್ಷಕ ಲೂಹಿವ್ರೋರಿ ಹೇಳುವಂತೆ 'ಶ್ರೀಮಂತ ಕುಟುಂಬಗಳ, ವಿದ್ಯಾಭ್ಯಾಸ ಅಧಿಕವಿರುವ ಕುಟುಂಬಗಳ ಮಕ್ಕಳು ಮೂರ್ಖ ಶಿಕ್ಷಕರಿಂದ ಕಲಿಸಲ್ಪಡಬಹುದು. ಆದರೆ ನಾವು ದುರ್ಬಲ ಮಕ್ಕಳಿಗೆ ಕಲಿಸಬೇಕು. ಅವರನ್ನೂ ಸಬಲರನ್ನಾಗಿ ಮಾಡಬೇಕು. ಇದು ಫಿನ್ನಿಶ್ ಧ್ಯೇಯ.'

## ಅಲ್ಲಿ ಪರೀಕ್ಷೆಯೇ ಇಲ್ಲ!

ಎಲ್ಲಕ್ಕಿಂತ ಮುಖ್ಯ ಇಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಗಳೇ ಇಲ್ಲ! ಅಂದರೆ ನಮ್ಮಲ್ಲಿಯಂತೆ ಪಬ್ಲಿಕ್ ಪರೀಕ್ಷೆ, ಬೋರ್ಡ್ ಪರೀಕ್ಷೆ, ಆಗಾಗಿನ ಯುನಿಟ್ ಟೆಸ್ಟ್‌ಗಳು ಇವು ಇಲ್ಲ. ಅದರರ್ಥ ಮೌಲ್ಯಮಾಪನವೇ ಇಲ್ಲವೆಂದಲ್ಲ. ಆದರೆ ಇಲ್ಲಿರುವ ಮೌಲ್ಯಮಾಪನ ನಿಜವಾದ ಮೌಲ್ಯಮಾಪನ. ಪ್ರತಿ ಶಿಕ್ಷಕನಿಗೆ ತನ್ನ ತರಗತಿಯ ಪ್ರತಿ ಮಗುವಿನ ಸರಿಯಾದ ಮೌಲ್ಯಮಾಪನ ಮಾಡುವ ಜವಾಬ್ದಾರಿ, ಹಾಗೆ ಮಾಡಿದಾಗ ಮಗುವಿನ ಕಲಿಕೆಯಲ್ಲಿ ನ್ಯೂನತೆಯಿದ್ದರೆ ಅದನ್ನು ಸರಿಪಡಿಸುವ ಜವಾಬ್ದಾರಿ ಎರಡೂ ನೀಡಲ್ಪಟ್ಟಿರುತ್ತವೆ. ಅಂದರೆ ತುಂಬಾ ದೊಡ್ಡ ಜವಾಬ್ದಾರಿ ತಾನೆ? ಹಾಗಾಗಿಯೇ ಶಿಕ್ಷಕನ ಸಂಬಳವೂ ಹೆಚ್ಚೇ. ಮಕ್ಕಳೂ ಅಷ್ಟೇ ತಂತ್ರಜ್ಞಾನದ ಪ್ರತಿಯೊಂದು ಆವಿಷ್ಕಾರವೂ ಮಕ್ಕಳಿಗಾಗಿ ಶಾಲೆಗಳಲ್ಲಿ ಇದ್ದರೂ, ತರಗತಿ ಯಲ್ಲಿರುವುದು ಶಿಕ್ಷಕನ ಡೆಸ್ಕ್‌ಟಾಪ್ ಮತ್ತು ಒಂದು ಸ್ಮಾರ್ಟ್ ಬೋರ್ಡ್. ಪ್ರತಿನಿತ್ಯ ನಡೆಯುವ **"Self assessment"** ಸ್ವಮೌಲ್ಯಮಾಪನಗಳು (ನಮ್ಮಲ್ಲಿಯ ಯುನಿಟ್ ಟೆಸ್ಟ್‌ಗಳಂತೆ) ಹೊಸ ಹೊಸ ಕ್ರಿಯಾಶೀಲ ರೀತಿಯಲ್ಲಿ ನಡೆಯುತ್ತವೆ. ಉದಾಹರಣೆಗೆ ಮಕ್ಕಳು ಆ ದಿನ ಕಲಿತ ವಿಷಯಗಳ ಬಗೆಗೆ ಒಂದು ಪ್ರಬಂಧ ಬರೆಯುವುದು.**'peer assessment'** ತಮ್ಮ ಸಹಪಾಠಿಗಳಿಗೆ ಪರೀಕ್ಷೆ ಕೊಟ್ಟು, ಅದನ್ನು ತಿದ್ದುವಾಗ ಅವರಿಗೆ ಧನಾತ್ಮಕ ರೀತಿಯಲ್ಲಿ ಸಲಹೆಗಳನ್ನು ನೀಡುವುದು.

ಇವೆಲ್ಲವೂ ಸರಿ. ಪರೀಕ್ಷೆಯೇ ಇಲ್ಲದಿರುವ ಈ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ಎಷ್ಟು ಯಶಸ್ವಿಯಾಗಿದೆ? ಫಿನ್ನಿಶ್ ವಿದ್ಯಾರ್ಥಿಗಳು ಜಗತ್ತಿನ ಇತರ